

ಹೇಗೇಗೋ ಕತ್ತರಿಸಿದ ಸೇಬಿನ ತುಂಡುಗಳಂತೆ ಅಥವಾ ಬಹುಶಃ ಯಾವುದೋ ದೊಡ್ಡ ಆಲ್ ಬೈನೊ ನಾಯಿಯ ಪಾದದ ಕತ್ತರಿಸಿದ ಉಗುರುಗಳ ಗೊಂಚಲಿನಂತೆ ಇದು ಕಾಣಿಸುತ್ತದೆ– ಒಪೆರಾ ಹೌಸ್ ಕಟ್ಟಡ ನಿರ್ಮಾಣಕ್ಕೂ ಮುಂಚೆ ನಡೆಸಿದ ವಿನ್ಯಾಸ ಸ್ಪರ್ಧೆಯಲ್ಲಿ ಗೆದ್ದುಕೊಂಡಿದ್ದ ಮಾದರಿಯನ್ನು ಸಮೀಕ್ಷಿಸಿ 'ಡೈಲಿ ಮಿರರ್' ಪತ್ರಿಕಾ ಅಂಕಣಕಾರರು ಹೇಳಿದ್ದ ಮಾತು.

ಸಾಂಸ್ಕೃತಿಕ ಹಾಗೂ ಸಾಮಾಜಿಕ ಬದುಕಿನ ಮೇಲೆ ಈ ಕಟ್ಟಡದ ದೀರ್ಘ ಪರಿಣಾಮಗಳನ್ನು 'ದಿ ಪೀಪಲ್ಸ್ ಹೌಸ್: ಸಿಡ್ನಿ ಒಪೆರಾ ಹೌಸ್ ಅಟ್ 50' ಹೆಸರಿನ ವಸ್ತುಪ್ರದರ್ಶನ ಸಂಭ್ರಮಿಸುತ್ತಿದೆ.

ಎರಡನೇ ಮಹಾಯುದ್ಧದ ನಂತರದ ವರ್ಷಗಳಲ್ಲಿ ರಾಷ್ಟ್ರೀಯ ಅಸ್ಮಿತೆಯ ಕುರಿತಾಗಿ ತೀವ್ರ ಪ್ರಶ್ನೆಗಳು, ಮರು ವ್ಯಾಖ್ಯಾನಗಳು ನಡೆಯುತ್ತಿದ್ದ ಸಂದರ್ಭದಲ್ಲಿ ವಿಶ್ವದ ಸಾಂಸ್ಕೃತಿಕ ರಂಗದಲ್ಲಿ ತನ್ನದೇ ನೆಲೆ ಕಂಡುಕೊಳ್ಳುವ ಆಸ್ಟ್ರೇಲಿಯಾದ ಆಕಾಂಕ್ಷೆಯ ಫಲವೇ ಈ ರಂಗಮಂದಿರ.

ಒಪೆರಾ ಹೌಸ್ ಆರಂಭದ ವರ್ಷಗಳ ಮಾಂತ್ರಿಕತೆಯ ಕ್ಷಣಗಳನ್ನು ಈ ಪ್ರದರ್ಶನಕ್ಕೆ ಭೇಟಿ ನೀಡುವ ಸಂದರ್ಶಕರು ಅನುಭವಿಸಬಹುದು. ಇದನ್ನು ರೂಪಿಸುವುದರ ಹಿಂದಿನ ಅಪೂರ್ವ ಕಥೆಗಳನ್ನೂ ಶೋಧಿಸಬಹುದು.

ಅಪರೂಪದ ಆರ್ಕೈವಲ್ ದಾಖಲೆಗಳು, ಕಾರ್ಯಕ್ರಮಗಳು, ಪೋಸ್ಟರ್‌ಗಳು, ಕಾಸ್ಟ್ಯೂಮ್‌ಗಳು, ಛಾಯಾಚಿತ್ರಗಳು, ಸೆಟ್‌ಬಾಕ್ಸ್‌ಗಳು, ಆರ್ಕಿಟೆಕ್ಚರಲ್ ಡ್ರಾಯಿಂಗ್‌ಗಳು, ಮಾಡೆಲ್‌ಗಳು, ಆರ್ಟ್ ವರ್ಕ್‌ಗಳು ಹಾಗೂ ಬಗೆಬಗೆಯ ಸ್ಮರಣಿಕೆಗಳನ್ನು ಈ ಪ್ರದರ್ಶನ ಅನಾವರಣಗೊಳಿಸುತ್ತಿದೆ.

### ಆಸ್ಟ್ರೇಲಿಯಾದ 'ತಾಜ್ ಮಹಲ್!'

'ದಿ ಅದರ್ ತಾಜ್ ಮಹಲ್: ವಾಟ್ ಹ್ಯಾಪೆನ್ಡ್ ಟು ದಿ ಸಿಡ್ನಿ ಒಪೆರಾ ಹೌಸ್' ಎಂಬುದು 1968ರಲ್ಲಿ ಪ್ರಕಟವಾದ ಆಸ್ಟ್ರೇಲಿಯನ್ ಪತ್ರಕರ್ತ ಹಾಗೂ ಲೇಖಕ ಯಿಯೊಮನ್ಸ್ ಜಾನ್ ಅವರ ಪುಸ್ತಕದ (ಪ್ರಕಾಶಕರು: ಲಂಡನ್‌ನ ಲಾಂಗ್ ಮನ್ಸ್) ಹೆಸರು. ಆಗಿನ್ನೂ ನಿರ್ಮಾಣ ಹಂತದಲ್ಲಿದ್ದ ಒಪೆರಾ ಹೌಸ್ ಅನ್ನು ನಮ್ಮ ರಾಷ್ಟ್ರದ ತಾಜ್ ಮಹಲ್‌ಗೆ ಇಲ್ಲಿ ಹೋಲಿಕೆ ಮಾಡಿರುವುದು ವಿಶೇಷ. ಆ ಕಾಲದಲ್ಲಿ, ಅತ್ಯಂತ ವಿವಾದಾತ್ಮಕ ಎನಿಸಿದ್ದ ಒಪೆರಾ ಹೌಸ್ ಕಟ್ಟಡ ನಿರ್ಮಾಣದ ಕುರಿತಾದ ಚಿತ್ರಣ ಈ ಪುಸ್ತಕದಲ್ಲಿದೆ.

> ಈ ಕಟ್ಟಡದ ಮೇಲೆ ತನ್ನ ಕಿರಣಗಳು ಪ್ರತಿಬಿಂಬಿಸುವವರೆಗೆ ತನ್ನ ಬೆಳಕು ಎಷ್ಟು ಚೆಂದ ಎಂದು ಸೂರ್ಯನಿಗೇ ತಿಳಿದಿರಲಿಲ್ಲ
>
> **-ಲೂಯಿಸ್ ಕಾಹ್ನ್**, ವಾಸ್ತುಶಿಲ್ಪಿ

'ಒಪೆರಾ ಹೌಸ್' ರಂಗಸ್ಥಳದ ಮೇಲಿನ ಹಲಬಗೆಯ ಪ್ರದರ್ಶನಗಳು, ಸಂಗೀತ, ಆರ್ಕೆಸ್ಟ್ರಾ, ರಂಗರೂಪಗಳು ಜನರನ್ನು ರಂಜಿಸುತ್ತಿವೆ. ಈ ವರ್ಷ ಜುಲೈ 1ರಿಂದ ಆರಂಭವಾಗಿರುವ ಈ ಪ್ರದರ್ಶನ 2024ರ ಮಾರ್ಚ್ 3ರವರೆಗೂ ನಡೆಯಲಿದೆ. ಈ ಪ್ರದರ್ಶನ ನೋಡುತ್ತಿದ್ದ ಸಂದರ್ಭ, ಒಪೆರಾ ಹೌಸ್‌ನಲ್ಲಿ ಪ್ರದರ್ಶನ ನೀಡಿದ್ದ ನಮ್ಮದೇ ರಾಜ್ಯದ ಸರೋದ್ ಮಾಂತ್ರಿಕ ರಾಜೀವ ತಾರಾನಾಥರ ಪೋಸ್ಟರ್ ನೋಡಿದಾಗ ಆದ ರೋಮಾಂಚನ ಅಷ್ಟಿಷ್ಟಲ್ಲ.

### ನಿರ್ಮಿತಿಯ ಕಥೆ

ಈ ಕಟ್ಟಡ ನಿರ್ಮಾಣದ ಹಿಂದಿನ ಕಥೆಗಳಂತೂ ರೋಚಕ; ಜೊತೆಗೆ ವೈರುಧ್ಯಗಳ ಕಂತೆ. ಅದ್ಭುತ ಕಟ್ಟಡ ನಿರ್ಮಿತಿಯ ಕಥೆಯಲ್ಲಿ ಗೆಲುವಿನ ನಲಿವು, ವಿಷಾದದ ಛಾಯೆ ಹಾಸುಹೊಕ್ಕಾಗಿದೆ. ಇಂದು ಈ ಕಟ್ಟಡವನ್ನು ಪ್ರೀತಿಸಲಾಗುತ್ತದೆ. ಆದರೆ ಅದು ನಿರ್ಮಾಣ ಹಂತದಲ್ಲಿದ್ದಾಗ ಧೋರಣೆಗಳು ಬೇರೆಯವೇ ಆಗಿದ್ದವು. ಈ ಕಟ್ಟಡದ ವೆಚ್ಚ, ವಿಳಂಬ ಹಾಗೂ ಕಟ್ಟಡದ ವಾಸ್ತುಶಿಲ್ಪಿಯ ಕುರಿತಾಗಿ ಸ್ಥಳೀಯ ಪತ್ರಿಕೆಗಳು ನಿರಂತರ ಟೀಕೆಗಳನ್ನು ಮಾಡಿದ್ದವು. ಈಗ ಹೆಚ್ಚು ಆಕರ್ಷಕ ಎನಿಸುತ್ತಿರುವ